ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 37/2017 ಸಿಡಬ್ಲೂ: 8 ಪಿ ಡಬ್ಲೂ: 7**

| | |
|---|---|
| ಹೆಸರು | ಸುರೇಶ್ |
| ತಂದೆಯ ಹೆಸರು | ಪುಟ್ಟಸ್ವಾಮಿಶೆಟ್ಟಿ |
| ವಯಸ್ಸು | 30 ವರ್ಷ |
| ವೃತ್ತಿ | ಚಾಲಕ |
| ವಾಸ | ಬ್ರಹ್ಮಪುರ |

ದಿನಾಂಕ: 11.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದ:

1. ಚಾಸಾ 1 ರಿಂದ 7, 9 ರಿಂದ 11 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇಲ್ಲ ಘಟನೆ ನಡೆದಿದೆ ಎಂಬ ಸಮಯದಲ್ಲಿ ನಾನು ಬೆಂಗಳೂರಿನಲ್ಲಿದ್ದೆ. ಆದ್ದರಿಂದ ನನಗೆ ಏನೂ ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಎಂ ಒ 1 ರಿಂದ 3 ಅನ್ನು ನೋಡಿ ಗುರುತಿಸಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.

ಪಾಟೀ ಸವಾಲು: ಎ ಪಿ ಪಿ ರವರಿಂದ:

2. ನಾನು ಬ್ರಹ್ಮಪುರ ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ದಿ: 29.03.2017 ರ ಯುಗಾದಿ ಹಬ್ಬವಾದ್ದರಿಂದ ನಾನು ಹಾಗೂ ನಮ್ಮ ಗ್ರಾಮಸ್ಥರು ಸಂಜೆ 5.30 ಗಂಟೆಗೆ ಅರಳಿಕಟ್ಟೆಯ ಬಳಿ ಕುಳಿತುಕೊಂಡು ಮಾತನಾಡುತ್ತಿದ್ದೆವು ಎಂದರೆ ಸರಿಯಲ್ಲ. ಆ ಸಮಯಕ್ಕೆ

ಚಾಸಾ 1 ನಾಗೇಂದ್ರ ಅರಳಿಕಟ್ಟೆಯ ಬಳಿಗೆ ಬಂದಿದ್ದು, ಅಲ್ಲಿದ್ದ 1ನೇ ಆರೋಪಿಗೆ ಚಾಸಾ1 ರವರು ಹಣವನ್ನು ಕೊಡುವಂತೆ ಕೇಳಿದನು ಎಂದರೆ ಸರಿಯಲ್ಲ. ಅದಕ್ಕೆ 1ನೇ ಆರೋಪಿಯು ನನ್ನ ಬಳಿ ಹಣ ಇಲ್ಲ ಎಂದು ಏಕಾಏಕಿ ಜಗಳ ಮಾಡಿದರು ಎಂದರೆ ಸರಿಯಲ್ಲ. ಇದನ್ನು ನೋಡಿದ 1ನೇ ಆರೋಪಿಯವರ ಮನೆಯವರು ಅಲ್ಲಿಗೆ ಬಂದರು ಎಂದರೆ ಸರಿಯಲ್ಲ. ಅದೇ ಸಮಯಕ್ಕೆ 1ನೇ ಆರೋಪಿಯು ರಸ್ತೆಯಲ್ಲಿ ಬಿದಿದ್ದ ಒಂದು ದೊಣ್ಣೆಯನ್ನು ತೆಗೆದುಕೊಂಡು ಚಾಸಾ 1 ರವರ ಎಡತಲೆ, ಬಲ ಭುಜ, ಬೆನ್ನು, ಎಡತೊಡೆಯ ಮೇಲೆ ಹೊಡೆದು ನೋವು ಉಂಟು ಮಾಡಿದನು ಎಂದರೆ ಸರಿಯಲ್ಲ. ಚಾಸಾ 1 ನೋವಿನಿಂದ ಕೂಗುತ್ತಿದ್ದಾಗ ಜಗಳ ಬಿಡಿಸಲು ಹೋದ ಚಾಸಾ 5 ಹಾಗೂ ಅಲ್ಲಿಯೇ ಇದ್ದ 2ನೇ ಆರೋಪಿ ಮತ್ತು 3 ರಿಂದ 5ನೇ ಆ ರೋಪಿ ಜಗಳ ತೆಗೆದು 1ನೇ ಆರೋಪಿತ ನನ್ನ ಬಳಿ ಇದ್ದ ದೊಣ್ಣೆಯಿಂದ ಚಾಸಾ 5 ರವರ ಬಲತಲೆಗೆ ಹೊಡೆದರು ಎಂದರೆ ಸರಿಯಲ್ಲ. 2ನೇ ಆರೋಪಿಯ ಕೈನಿಂದ ಚಾಸಾ5 ರವರ ಮೈ ಎಲ್ಲಾ ಗುದ್ದಿ ನೋವು ಮಾಡಿದರು ಎಂದರೆ ಸರಿಯಲ್ಲ. ನಂತರ 2ನೇ ಆರೋಪಿಯು ಅಲ್ಲೇ ಬಿದ್ದಿದ್ದ ಒಂದು ರಿಪೀಸ್ ಪಟ್ಟಿಯನ್ನು ತೆಗೆದುಕೊಂಡು ಚಾಸಾ 6 ರವರ ಮೈ ಕೈ ಮೇಲೆ ಹೊಡೆದು ಸಾರ್ವಜನಿಕ ರಸ್ತೆಯಲ್ಲಿ ಅವಮಾನಗೊಳಿಸಿ ನೋವು ಉಂಟು ಮಾಡಿದನು ಎಂದರೆ ಸರಿಯಲ್ಲ. 1ನೇ ಆರೋಪಿಯು 2ನೇ ಆರೋಪಿಯ ಕೈನಲ್ಲಿದ್ದ ದೊಣ್ಣೆ ಮತ್ತು ರಿಪೀಸ್ ಪಟ್ಟಿಯಿಂದ ನನ್ನ ತಾಯಿ ಚಾಸಾ 6 ರವರ ಮೈ ಮೇಲೆಲ್ಲಾ ಹೊಡೆದು ಸಾರ್ವಜನಿಕ ರಸ್ತೆಯಲ್ಲಿ ಕಾಲುಗಳಿಂದ ತುಳಿದು ಸಾರ್ವಜನಿಕ ರಸ್ತೆಯಲ್ಲಿ ಅವಮಾನ ಮಾಡಿದನು ಎಂದರೆ ಸರಿಯಲ್ಲ. 3 ರಿಂದ 5ನೇ ಆರೋಪಿತರು ಚಾಸಾ 2 ಅವರೊಂದಿಗೆ ಜಗಳ ತೆಗೆದು ಸಾರ್ವಜನಿಕ ರಸ್ತೆಯಲ್ಲಿ ಕೈಗಳಿಂದ ಹೊಡೆದು ಅವಮಾನಗೊಳಿಸಿ ನೋವು ಮಾಡಿದರು ಎಂದರೆ ಸರಿಯಲ್ಲ. 3 ಮತ್ತು 4ನೇ ಆರೋಪಿ ಚಾಸಾ 4 ರವರನ್ನು ಕುರಿತು ನಿನ್ನ ಭಾವ

ಪರವಾಗಿ ಬಂದಿದ್ದೀಯಾ ಎಂದು ಜಗಳ ತೆಗೆದು ಆತನ ಶರ್ಟನ್ನು ಹರಿದು ಹಾಕಿ ಕೈನಿಂದ ಆತನ ಮೇಲೆ ಗುದ್ದಿ ಕಾಲುಗಳಿಂದ ಒದ್ದಿ ನೋವು ಉಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ1 ಮತ್ತು ಇತರರು ನೋವು ತಡೆಯಲಾರದೆ ಕಿರುಚಿಕೊಂಡಾಗ ಅಲ್ಲೇ ಇದ್ದ ನಾನು ಮತ್ತು ಚಾಸಾ 4 ಮತ್ತು 7 ರವರು ಜಗಳವನ್ನು 9 ಬಿಡಿಸಿ ಸಮಾಧಾನ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ಮತ್ತು 2ನೇ ಆರೋಪಿಯು ತಮ್ಮ ಕೈಯಲ್ಲಿದ್ದ ರಿಪೀಸ್ ಪಟ್ಟಿಯನ್ನು ಅಲ್ಲಿಯೇ ಬಿಸಾಡಿ ಹೋದರು ಎಂದರೆ ಸರಿಯಲ್ಲ. ಅದನ್ನು ಚಾಸಾ 4 ರವರು ಎತ್ತಿಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಎಂ ಒ 1 ರಿಂದ 3 ರ ವಸ್ತುಗಳನ್ನು ಈ ಹಿಂದೆಯೇ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲ್ಕಂಡ ವಿಳಾಸದಲ್ಲಿ ----------------- ಮತ್ತೆ ನೋಡಿದರೆ ಗುರುತಿಸುತ್ತೇನೆ. ಈಗ ಓದಿ ಹೇಳಿದ ರೀತಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ 5 ಎಂದು ಗುರುತಿಸಲಾಗಿದೆ. ಆರೋಪಿತರ ಪರಿಚಯವಿದ್ದು, ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*